ರಾಜ್ಯದಲ್ಲಿನ ದೇವಸ್ಥಾನಗಳ ಜೀರ್ಣೋದ್ಧಾರ

731 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ರಾಜ್ಯದ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) ತುಮಕೂರು ಜಿಲ್ಲೆಗೆ ಹಾಗೂ ಕುಣಿಗಲ್ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಹಣ ನೀಡಲಾಗಿದೆ?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) 1997-98ರಲ್ಲಿ 1003 ದೇವಸ್ಥಾನಗಳಿಗೆ 1.76ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ತುಮಕೂರು ಜಿಲ್ಲೆಗೆ ಬಿಡುಗಡೆ ಮಾಡಿದ ಹಣ - ರೂ.17,25,000

ಕುಣಿಗಲ್ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣ - ರೂ. 80,000

ಕುಣಿಗಲ್ ನೂತನ ಬಸ್ ನಿಲ್ದಾಣದಲ್ಲಿ ಎಲ್ಲಾ ಬಸ್‌ಗಳ ನಿಲುಗಡೆ ಬಗ್ಗೆ

732 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ನೂತನ ಬಸ್ ನಿಲ್ದಾಣಕ್ಕೆ ನಿಲುಗಡೆ ಇರುವ ಎಲ್ಲಾ ಬಸ್‌ಗಳು ಹೋಗದೇ ಇರುವುದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಎಲ್ಲಾ ಬಸ್ಸುಗಳ ನಿಲುಗಡೆಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಹೌದು.

ಆ) ಕುಣಿಗಲ್ ಮೂಲಕ ಹಾದುಹೋಗುವ ಎಲ್ಲಾ ಸಾರಿಗೆಗಳಿಗೆ (ನಿಲುಗಡೆರಹಿತ ಸಾರಿಗೆಗಳನ್ನು ಹೊರತುಪಡಿಸಿ) ನಿಲುಗಡೆಯನ್ನು ಕಲ್ಪಿಸಲಾಗಿದೆ.

ಆರಾಧನಾ ಯೋಜನೆಯಲ್ಲಿ ಬಿಡುಗಡೆಯಾದ ಹಣ

734 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ಬಿಡುಗಡೆಯಾಗುತ್ತಿರುವ ಹಣ ಗ್ರಾಮೀಣ ಭಾಗದಲ್ಲಿನ ದೇವಸ್ಥಾನಗಳ ಬೇಡಿಕೆಗೆ ಅನುಗುಣವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?